## ಡಾಕ್ಟರ್ ಸಾಹೇಬ್: ತಾತ್ಕಾಲಿಕ ವಿದಾಯ

**ಅದೊಂದು ನಿಜಕ್ಕೂ ಅಪೂರ್ವ ಗಳಿಗೆ.**

24 ನವೆಂಬರ್ 2023. ರಾತ್ರಿ ಏಳೂವರೆ ಗಂಟೆ. ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ಆವರಣದಲ್ಲಿ ಗೆಳೆಯರೊಡನೆ ಮಾತಾಡುತ್ತಿರುವಾಗ ನನ್ನೊಳಗೆ ಎಲ್ಲೋ ಹುದುಗಿದ್ದ 'ಡಾಕ್ಟರ್ ಸಾಹೇಬ್' ಜೀವನ ಚರಿತ್ರೆ ಏಕಾಏಕಿ ಹೊರಬಂತು!

ತಿಪಟೂರಿನ ಕಾಲೇಜು ದಿನಗಳಲ್ಲಿ ನಟರಾಜ್ ಹೊನ್ನವಳ್ಳಿ, ಶ್ರೀನಿವಾಸಕುಮಾರ್ ಹಾಗೂ ರೈತ ಸಂಘದಿಂದ ಪರಿಚಯವಾದ ಲೋಹಿಯಾ ಬರವಣಿಗೆ ಈ ಗಳಿಗೆಯವರೆಗೆ ನನ್ನೊಳಗೆ ಬೆಳೆಯುತ್ತಲೇ ಇದೆ. ಲೋಹಿಯಾ ಇಂಗ್ಲಿಷ್, ಹಿಂದಿ ಬರಹ, ಭಾಷಣಗಳ ಸಾವಿರಾರು ಪುಟಗಳು; ಅನುವಾದಗಳು, ಸಂದರ್ಶನಗಳು; ಏಳೆಂಟು ಹಿಂದಿ, ಇಂಗ್ಲಿಷ್ ಜೀವನ ಚರಿತ್ರೆಗಳು; ನನ್ನ ಕಾಲಕಾಲದ ಟಿಪ್ಪಣಿಗಳು... ಇವೆಲ್ಲ ಸುದೀರ್ಘ ಕಥನವಾಗಿ ಹೊರ ಬರಲು ಕಾತರಿಸುತ್ತಿದ್ದಂತಿತ್ತು.

ಸುಮಾರು ಎಂಟು ತಿಂಗಳ ಕಾಲ ಇವನ್ನೆಲ್ಲ ಮತ್ತೆ ಮತ್ತೆ ಓದಿ, ಪ್ರತಿವಾರ ದಿನಕ್ಕೆ ಏಳೆಂಟು ಗಂಟೆ ಟಿಪ್ಪಣಿ ಮಾಡಿ, ಪ್ರತಿ ವಾರ ತಿದ್ದಿ ಬರೆದ ಲೋಹಿಯಾ ಜೀವನಯಾನ ಚರಿತ್ರೆ–ಕಾದಂಬರಿ–ವಿಮರ್ಶೆ–ಕಾವ್ಯ–ರಾಜಕಾರಣಗಳ ಸಂಗಮವಾಗಿದೆ ಎಂದು ಓದಿದವರು ಹೇಳತೊಡಗಿದರು...

ಡಾಕ್ಟರ್ ಸಾಹೇಬರ ಜೊತೆ ಒಡನಾಡಿದ್ದ ಸಮಾಜವಾದಿ ಪಕ್ಷದ ತೀರ್ಥಹಳ್ಳಿ ಕ್ಷೇತ್ರದ ಶಾಸಕ ಕೋಣಂದೂರು ಲಿಂಗಪ್ಪನವರ ಚಾರಿತ್ರಿಕ ವಿವರಗಳು; ಶೂದ್ರ ಶ್ರೀನಿವಾಸ್; ರವಿವರ್ಮಕುಮಾರ್; ಮಂಗ್ಳೂರ ವಿಜಯ, ದೇವು ಪತ್ತಾರ್; ಸವಿತಾ ನಾಗಭೂಷಣ, ಶ್ರೀಧರ ಏಕಲವ್ಯ, ಮೋಹನ್ ಮಿರ್ಲೆ, ಲಕ್ಷ್ಮಣ ಕೊಡಸೆ, ಶೋಯಿಂಕಾ, ಪದ್ಮಾ ಶ್ರೀರಾಮ್ ಈ ಎಲ್ಲರೂ ಒದಗಿಸಿದ ವಿವರಗಳಿಗೆ ನಾನು ಋಣಿ.

ಈ ಧಾರಾವಾಹಿಯ ಆರಂಭದ ಸಂಚಿಕೆಯಲ್ಲಿ ನೆನೆದಿರುವ ಜೀವನ ಚರಿತ್ರೆಗಳು, ಲೋಹಿಯಾ ಬರಹಗಳು; ಕಾಲಕಾಲಕ್ಕೆ ಓದುಗ ಓದುಗಿಯರ ನಿರೀಕ್ಷೆ, ತೀವವಾದ ಕಣ್ಣುಗಳು... ಎಲ್ಲವೂ 'ಡಾಕ್ಟರ್ ಸಾಹೇಬ್' ಜೀವನಯಾನ ಹೀಗೆ ಮುನ್ನಡೆಯಲು ಕಾರಣವಾಗಿವೆ.

ನನ್ನ ಎಂಟನೆಯ ವಯಸ್ಸಿನಿಂದಲೂ ನನ್ನ ಸಾಂಸ್ಕೃತಿಕ ಸಂಗಾತಿಯಾಗಿರುವ 'ಸುಧಾ' ಮೂಲಕ 'ಡಾಕ್ಟರ್ ಸಾಹೇಬ್' ಪ್ರತಿವಾರ ಸಾವಿರಾರು ಓದುಗ, ಓದುಗಿಯರಿಗೆ ತಲುಪಿದ ಸಾರ್ಥಕ ಭಾವ; ಇದು ಮುಗಿಯುತ್ತಿದೆ ಎಂಬ ಖಾಲಿತನ; ಭಾರತೀಯ ರಾಜಕಾರಣದ ಅರ್ಥಪೂರ್ಣ ಯುಗ ಸರಿದು ಹೋದ ಬಗೆಗಿನ ವಿಷಾದ... ಇವೆಲ್ಲ ಭಾವಗಳು ಈಚಿನ ವಾರಗಳಲ್ಲಿ ಮುತ್ತಿದ್ದವು. ಲೋಹಿಯಾ ನಿರ್ಗಮನದ ಭಾಗ ಬರೆಯುವಾಗ ಕಣ್ಣೀರು ತುಳುಕಿಯೇ ಬಿಟ್ಟಿತು.

ಇದೊಂದು 'ತಾತ್ಕಾಲಿಕ ವಿದಾಯ' ಅಷ್ಟೆ! ಕಾರಣ, ಡಾಕ್ಟರ್ ಸಾಹೇಬ್, ಬಾಬಾಸಾಹೇಬ್, ಮಹಾತ್ಮ ಥರದ ಮಹಾನ್ ಚೇತನಗಳಿಗೆ 'ವಿದಾಯ' ಎಂದೂ ಇರುವುದಿಲ್ಲ. ಅವರು ನಮ್ಮೊಡನೆ, ನಂತರದ ತಲೆಮಾರುಗಳೊಡನೆ ಬದುಕುತ್ತಲೇ ಇರುತ್ತಾರೆ. 'ಡಾಕ್ಟರ್ ಸಾಹೇಬ್' ಪುಸ್ತಕ ರೂಪದಲ್ಲೂ ಹೊರಬರಲಿದ್ದಾರೆ...

ನನ್ನ ಬದುಕಿನ ಅರ್ಥಪೂರ್ಣ ಕೆಲಸಕ್ಕೆ ಒತ್ತಾಸೆಯಾದ 'ಸುಧಾ' ಸಂಪಾದಕೀಯ ಬಳಗಕ್ಕೆ; ಹದಿಮೂರು ವಾರ ಬರೆಯಹೊರಟಿದ್ದ ಜೀವನಯಾನಕ್ಕೆ ಇಪ್ಪತ್ತೆರಡು ವಾರ ಅವಕಾಶ ವಿಸ್ತರಿಸಿದ ಸಂಪಾದಕರಿಗೆ; ಮೋಣಪ್ಪನವರ ವರ್ಣಮಯ ಚಿತ್ರ ನಿರೂಪಣೆಗೆ; ವಿನ್ಯಾಸಕಾರರಿಗೆ... ಪ್ರತಿ ವಾರ ಸ್ಪಂದಿಸಿದ ಓದುಗ, ಓದುಗಿಯರಿಗೆ ನನ್ನ ಕೃತಜ್ಞತೆಗಳು.

–ನಟರಾಜ್ ಹುಳಿಯಾರ್

ಲೋಹಿಯಾ ಕಾರಿಳಿದು ಹೊರಟಾಗ ಪುರಿ ಕೇಳಿದರು: 'ವಾಟ್ ಎಬೌಟ್ ಪಟೇಲ್?'

ಲೋಹಿಯಾ ಹಿಂದೆ ತಿರುಗಿ ವಿಷಾದದಿಂದ ಹೇಳಿದರು: 'ನಮ್ಮ ಸಂಬಂಧ ಅಷ್ಟು ಚೆನ್ನಾಗಿರಲಿಲ್ಲ. ತಪ್ಪು ನಮ್ಮದೇ. ನಾವು ನೆಹರೂ ಪ್ರಭಾವಳಿಯಲ್ಲಿ ಮುಳುಗಿದ್ದೆವು. ನಾನು ತೀರಾ ಅಪ್ರಬುದ್ಧನಾಗಿದ್ದೆ. ಪಟೇಲ್ ತೀರಿಕೊಂಡ ಮೇಲೆ ಅವರ ಶಕ್ತಿಯನ್ನು ಅರ್ಥ ಮಾಡಿಕೊಳ್ಳತೊಡಗಿದೆ.'

'ಇದನ್ನೆಲ್ಲ ನೀವು ಬರೆಯಬೇಕು' ಎಂದರು ಪುರಿ.

ಲೋಹಿಯಾ ಮುಗುಳ್ನಕ್ಕರು. ಕೈಬೀಸುತ್ತಾ ಮನೆ ಹೊಕ್ಕರು. ಕಾರ್ ಹಿಂದಕ್ಕೆ ತಿರುಗಿಸುತ್ತಾ, 'ಛೇ! ತಾನೆಂಥ ಪೆದ್ದು ಮಾತನ್ನಾಡಿದೆ' ಎಂದು ಪೆಚ್ಚಾದ ರಾಜಿಂದರ್ ಪುರಿಗೆ ಹೀಗನ್ನಿಸಿತು:

'ಮನುಷ್ಯನೊಬ್ಬ ನಿವೃತ್ತಿಯ ನಂತರವಷ್ಟೇ ತನ್ನ ನೆನಪುಗಳನ್ನು ಬರೆದಿಡುತ್ತಾನೆ.'

ಲೋಹಿಯಾ ಎಂದೂ ನಿವೃತ್ತರಾಗಲಿಲ್ಲ. ನೆನಪುಗಳನ್ನು ಬರೆದಿಡಲಿಲ್ಲ.

ಲೋಹಿಯಾಗೆ ಹತ್ತಿರವಿದ್ದ ಮಧು ಲಿಮಯೆ, ಕಿಶನ್ ಪಟ್ನಾಯಕ್, ಕೋಣೆ ಸದಾಶಿವ ಕಾರಂತ, ರಬಿರಾಯ್... ಹಲವರು ಲೋಹಿಯಾ ನೆನಪುಗಳನ್ನು ಬರೆದರು; ಓಂಪ್ರಕಾಶ್ ದೀಪಕ್, ಓಂಕಾರ್ ಶರದ್, ಇಂದುಮತಿ ಕೇಳ್ಕರ್, ಮಸ್ತ್ರಾಂ ಕಪೂರ್ ಲೋಹಿಯಾ ಜೀವನಚರಿತ್ರೆಗಳನ್ನು ಬರೆದರು. ಲೋಹಿಯಾ ಎಲ್ಲೋ ಕೆಲವೆಡೆ ಮಾತಿನ ನಡುವೆ, ಸಂದರ್ಶನಗಳಲ್ಲಿ ಮಾತ್ರ ಸ್ವಂತದ ಬಗ್ಗೆ ಮಾತಾಡಿದ್ದರು. ಅವರು ರಮಾಗೆ ಬರೆದ ಪತ್ರಗಳಲ್ಲಿ ಮಾತ್ರ ಅಷ್ಟಿಷ್ಟು ಸ್ವಂತದ ಮಾತುಗಳಿದ್ದವು.

1932ರಿಂದ 1967ರವರೆಗೂ ಬರೆಯುತ್ತಿದ್ದ ಲೋಹಿಯಾ ಕೊನೆಯ ಪಕ್ಷ ಹತ್ತು ಸಾವಿರ ಪುಟಗಳಷ್ಟಾದರೂ ಒರಿಜಿನಲ್ ಚಿಂತನೆಗಳುಳ್ಳ ಮಾತು, ಬರಹಗಳನ್ನು ಬಿಟ್ಟು ಹೋಗಿದ್ದರು. ನೇರ, ಪ್ರಾಮಾಣಿಕ ಮಾತಿನ ಶಕ್ತಿಯನ್ನು ಹೆಚ್ಚು ನಂಬಿದ್ದ ಲೋಹಿಯಾರ ಸುದೀರ್ಘ ಮಾತುಗಳನ್ನು ಬರೆದಿಡುತ್ತಿದ್ದ, ಪ್ರಕಟಿಸುತ್ತಿದ್ದ ಸಮಾಜವಾದಿ ಸ್ತ್ರೀ, ಪುರುಷರು ಭಾರತದುದ್ದಕ್ಕೂ ಇದ್ದರು. ರಾತ್ರಿ ಸರೊತ್ತಿನವರೆಗೂ ಓದಿ, ತಿದ್ದಿ ಬರೆದಿದ್ದ ನೂರಾರು ಲೇಖನಗಳನ್ನು; ಹತ್ತಾರು ಪ್ರಕಟಿತ ಪುಸ್ತಕಗಳನ್ನು ಲೋಹಿಯಾ ನಮಗಾಗಿ ಬಿಟ್ಟು ಹೋಗಿದ್ದರು.

ಮಸ್ತ್ರಾಂ ಕಪೂರ್ ಲೋಹಿಯಾರನ್ನು ದೂರದಿಂದಷ್ಟೇ ನೋಡಿದ್ದರು. ಲೋಹಿಯಾರನ್ನು ಮಾತಾಡಿಸಲು ಹಿಂಜರಿಯುತ್ತಿದ್ದರು. ಸರ್ಕಾರಿ ಕೆಲಸದಲ್ಲಿದ್ದ ಅವರು ಲೋಹಿಯಾರನ್ನು ಭೇಟಿ ಮಾಡಿದರೆ ಸರ್ಕಾರದ ಕೆಂಗಣ್ಣಿಗೆ ಗುರಿಯಾಗುವ ಭಯದ ವಾತಾವರಣವೂ ಇತ್ತು.

ಲೋಹಿಯಾರನ್ನು ಭೇಟಿ ಮಾಡಲಾಗದ ಮಸ್ತ್ರಾಂ ಲೋಹಿಯಾರನ್ನು ಸಂಧಿಸುವ ಏಕಮಾತ್ರ ಮಾರ್ಗವಾಗಿ ಅವರ ಬರವಣಿಗೆಯ ಲೋಕ ಹೊಕ್ಕರು; 'ಎಲ್ಲಿ ಓದಿದರೂ ಸಾಕ್ರೆಟಿಸ್ ಡೈಲಾಗಿನಂತೆ ಥಟ್ಟನೆ ಹೊಸ ಚಿಂತನೆಗಳ ಸ್ಫೋಟ, ಹೊಸ ಹೊಸ ಹೊಳಹು' ಕಂಡು ವಿಸ್ಮಯಗೊಂಡು ಬರೆದರು:

'ಲೋಹಿಯಾರ ಎಲ್ಲ ಬರವಣಿಗೆಯನ್ನೂ ಓದಬೇಕೆನ್ನಿಸಿತು. ಆದ್ದರಿಂದಲೇ ಅನಾಮಿಕ ಪಬ್ಲಿಶರ್ಸ್ ಮಾಲೀಕ ಪಂಕಜ್ ಶರ್ಮ 'ಕಲೆಕ್ಟೆಡ್ ವರ್ಕ್ಸ್ ಆಫ್ ಲೋಹಿಯಾ' ಪ್ರಕಟಿಸುವ ಆಸೆ ತೋಡಿಕೊಂಡಾಗ, ತಕ್ಷಣ ಒಪ್ಪಿಕೊಂಡುಬಿಟ್ಟೆ.'

ಮಸ್ತ್ರಾಂ ತಮ್ಮಲ್ಲಿದ್ದ ಹಣವನ್ನೆಲ್ಲ ಹಾಕಿ ಲೋಹಿಯಾರ ಸಮಗ್ರ ಕೃತಿಗಳ ಇಂಗ್ಲಿಷ್, ಹಿಂದಿ ಸಂಪುಟಗಳ ಕ್ಯಾಲಿಕೊ ಪ್ರತಿಗಳನ್ನು ಪ್ರಕಟಿಸಲು ದಿಲ್ಲಿಯ ಅನಾಮಿಕ ಪ್ರಕಾಶನದ ಜೊತೆಗೂಡಿದರು. 2011ರಲ್ಲಿ ಬಂದ ಒಂಬತ್ತು ಸಂಪುಟಗಳು ಇಪ್ಪತ್ತೊಂದನೆಯ ಶತಮಾನದಲ್ಲಿ ಲೋಹಿಯಾ ಬರಹಗಳನ್ನು ಶಾಶ್ವತವಾಗಿ ಉಳಿಸುವ ಅದ್ಭುತ ಕೆಲಸ ಮಾಡಿವೆ.

ಈ ಸಂಪುಟಗಳು ಈ ಲೋಹಿಯಾ ಜೀವನಯಾನದ ಬರವಣಿಗೆಗೆ ಸದಾ ಒದಗಿ ಬಂದಿವೆ; ಈವರೆಗಿನ ಲೋಹಿಯಾ ಜೀವನಚರಿತ್ರೆಗಳಲ್ಲಿ ದೊರೆಯದ ಅಪರೂಪದ ದಾಖಲೆಗಳನ್ನು, ಪತ್ರಗಳನ್ನು ಒದಗಿಸಿವೆ.

ಲೋಹಿಯಾ ಬರೆದ ಹಾಗೂ ಲೋಹಿಯಾ ಕುರಿತ ಇತರರು ಬರೆದ ಸುಮಾರು ಹದಿನೈದು ಸಾವಿರ ಪುಟಗಳು ನನ್ನೆದುರಿಗಿದ್ದವು. ಈ ಎಲ್ಲ ಎಳೆಗಳೂ ಬೆರೆತು ಮೂಡಿದ 'ಡಾಕ್ಟರ್ ಸಾಹೇಬ್: ರಾಮಮನೋಹರ ಲೋಹಿಯಾ ಜೀವನಯಾನ'ದ ಕೊನೆಯ ಅಧ್ಯಾಯದ ಕೊನೆ ತಲುಪಿದಾಗ ಬರವಣಿಗೆ ಕೊನೆ ಮುಟ್ಟಿದ ನಿರಾಳತೆಯಿರಲಿಲ್ಲ. ಬದಲಿಗೆ, ಆಧುನಿಕ ಭಾರತದ ಸಮಾಜವಾದಿ ಆದರ್ಶ ಯುಗ ಮರಳಿ ಬಾರದಂತೆ ಕಳೆದು ಹೋಗಿಯೇಬಿಟ್ಟಿತೆ... ಎಂಬ ದುಗುಡವಿತ್ತು.

ಈ ಗಾಢ ದುಗುಡದೊಂದಿಗೆ ಈ ಜೀವನಯಾನಕ್ಕೆ ಕೊನೆ ಹೇಳುತ್ತಿರುವೆ.

ನಮಸ್ಕಾರ.

ಪ್ರತಿಕ್ರಿಯಿಸಿ: feedback@sudha.co.in